TAXES ON NON – FERROUS SCRAP
46 : (152)

ಶ್ರೀ ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ)

ಅ) 2008–09ನೇ ಸಾಲಿನಿಂದ ಜನವರಿ 2012ರವರೆಗೆ ಬೆಂಗಳೂರಿನಿಂದ ಇತರೆ ರಾಜ್ಯಗಳಿಗೆ non-ferrous scrap ಅಂತರ್ ರಾಜ್ಯ ಮಾರಾಟದ ಮಾಸಿಕವಾರು ತೆರಿಗೆ ಸಂಗ್ರಹಣೆ ವಿವರಗಳನ್ನು ನೀಡುವುದು.

ಆ) 2008–09 ರಿಂದ ಜನವರಿ 2012ರವರೆಗೆ ಬೆಂಗಳೂರಿನಿಂದ ಭಾರತದ ಇತರ ರಾಜ್ಯಗಳಿಗೆ non-ferrous scrapನ ಮಾರಾಟ ಮಾಡುವ ಡೀಲರುಗಳ ಹೆಸರುಗಳು ಹಾಗೂ ಅವರು ಪಾವತಿಸಿರುವ ತೆರಿಗೆ ವಿವರಗಳನ್ನು ನೀಡುವುದು.

ಇ) 2008–09 ರಿಂದ ಜನವರಿ 2012ರವರೆಗೆ non-ferrous scrapನ ಅಂತರ್ ರಾಜ್ಯ ಮಾರಾಟಗಾರರ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ ಹಾಗೂ ಸಂಗ್ರಹಿಸಿದ ತೆರಿಗೆ ಮತ್ತು ದಂಡದ ವಿವರಗಳನ್ನು ನೀಡುವುದು.

ಈ) ಇಲಾಖೆಯು non-ferrous scrapನ ವಹಿವಾಟು ನಡೆಸಿ, ನಿರಂತರವಾಗಿ ತೆರಿಗೆ ವಂಚನೆಯಲ್ಲಿ ತೊಡಗಿರುವ ವ್ಯಾಪಾರಿಗಳನ್ನು ಗುರುತಿಸಿ, ಪಟ್ಟಿ ಮಾಡಲಾಗಿದೆಯೇ?

ಉ) ಮಾಡಿದಲ್ಲಿ; ಇಂತಹ ವ್ಯಾಪಾರಿಗಳು ಯಾರು?

ಊ) ಮಾಡಿಲ್ಲದಿದ್ದಲ್ಲಿ; ಕಾರಣಗಳೇನು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) ಲಭ್ಯವಿರುವ ದಾಖಲೆಗಳ ವಿಶ್ಲೇಷಣೆಯ ಆಧಾರದ ಮೇಲೆ ಮಾಹಿತಿಯನ್ನು 'ಅನುಬಂಧ–ಎ' ನಲ್ಲಿ ಲಗತ್ತಿಸಲಾಗಿದೆ.

ಆ) ಲಭ್ಯವಿರುವ ದಾಖಲೆಗಳ ವಿಶ್ಲೇಷಣೆಯ ಆಧಾರದ ಮೇಲೆ ಮಾಹಿತಿಯನ್ನು 'ಅನುಬಂಧ–ಬಿ' ನಲ್ಲಿ ಲಗತ್ತಿಸಲಾಗಿದೆ.

ಇ) ಬೆಂಗಳೂರಿನ ದಕ್ಷಿಣ ವಲಯದ ಜಾರಿ ವಿಭಾಗವು 7 ಪ್ರಕರಣಗಳಲ್ಲಿ ತನಿಖೆ ನಡೆಸಿ, ರೂ. 3.89 ಲಕ್ಷಗಳಷ್ಟು ತೆರಿಗೆ ವಂಚನೆಯನ್ನು ಪತ್ತೆಹಚ್ಚಿ ಸಂಗ್ರಹಿಸಿರುತ್ತಾರೆ. ಇದರ ಜೊತೆಗೆ ಬೆಂಗಳೂರಿನ ಚಲಿಸುವ ದಳ ಮತ್ತು ತನಿಖಾ ಠಾಣೆಗಳಲ್ಲಿ 51 ಸಾಗಾಣಿಕೆಯ ಪ್ರಕರಣಗಳಲ್ಲಿ ತೆರಿಗೆ ವಂಚನೆಯನ್ನು ಪತ್ತೆ ಹಚ್ಚಿ ರೂ. 23.84 ಲಕ್ಷಗಳಷ್ಟು ಸಂಗ್ರಹಿಸಲಾಗಿದೆ.

ಈ) ವರ್ತಕರ ಮಾಸಿಕ ನಮೂನೆಗಳ ವಿಶ್ಲೇಷಣೆ ಮತ್ತು ಇತರೆ ಮಾಹಿತಿಯ ಆಧಾರದ ಮೇಲೆ ಇಲಾಖೆಯು ತಪಾಸಣೆಗಳನ್ನು ಕೈಗೊಂಡಿರುತ್ತದೆ.

ಬೆಂಗಳೂರಿನ ದಕ್ಷಿಣ ವಲಯ ಜಾರಿ ವಿಭಾಗದ ಅಧಿಕಾರಿಗಳು ಕೈಗೊಂಡ ತಪಾಸಣೆಯ ಸಮಯದಲ್ಲಿ ಕೆಳಕಂಡ ವರ್ತಕರು ತೆರಿಗೆಯನ್ನು ವಂಚಿಸುತ್ತಿದ್ದುದು ಕಂಡು ಬಂದಿರುತ್ತದೆ.

1) ವಿನೀತ ಮೆಟಲ್ ಕಾರ್ಪೋರೇಷನ್ (ಟಿನ್ : 29970135618)
2) ಶಿವರಂಜಿನಿ ಎಂಟರ್‌ಪ್ರೈಸಸ್ (ಟಿನ್ : 29830787147)
3) ವೀರನಾರಾಯಣ ಮೆಟಲ್ ಮಾರ್ಟ್ (ಟಿನ್ : 29090761267)
4) ಜಯರಾಮ್ ಮೆಟಲ್ ಹೌಸ್ (ಟಿನ್ : 29130055767)
5) ಶ್ರೀ ವಾಣಿ ಮೆಟಲ್ಸ್ (ಟಿನ್ : 29640059412)
6) ಶ್ರೀ ಲಕ್ಷ್ಮೀ ಮೆಟಲ್ (ಟಿನ್ : 29150637850)
7) ಪ್ರಾಗ್ ಮಾರ್ಕೆಟಿಂಗ್ (ಟಿನ್ : 29900816548)

ಮೇಲಿನ ಪ್ರಕರಣಗಳ ಕ್ರಮ ಸಂಖ್ಯೆ-6 & 7ರ ವರ್ತಕರ ಬಿಲ್ ಟ್ರೇಡಿಂಗ್ ಮೂಲಕ ಬೃಹತ್ ತೆರಿಗೆ ವಂಚನೆಯಲ್ಲಿ ತೊಡಗಿದ್ದುದರಿಂದ ಇವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿರುತ್ತದೆ.

ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಅಭಾವ

38 : (172)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಬೇಸಿಗೆ ಸಮೀಪಿಸುತ್ತಿದ್ದು, ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವಿನ ಅಭಾವ ಉಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಕುಡಿಯುವ ನೀರು ಮತ್ತು ಮೇವಿನ ಅಭಾವ ನೀಗಿಸಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು;